ವಿಳಾಸ : UNIREG
ದೂರವಾಣಿ ಸಂಖ್ಯೆ :2419440/2419361
ಫ್ಯಾಕ್ಸ್ ಸಂಖ್ಯೆ : 0821- 2419363/2419301

ಇಮೇಲ್ :registrar@uni-mysore.ac.in
ವೆಬ್ ಸೈಟ್: www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು-570 005.

ಸಂಖ್ಯೆ: ಇಟಿ-8/126/2014-15

ದಿನಾಂಕ: 01-02-2019

## ಸುತ್ತೋಲೆ

ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರು ಸಿಎಎಸ್ ಪದೋನ್ನತಿಯ ಸಂಬಂಧ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಘನತೆವೆತ್ತ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ ಬೋಧಕ ಮತ್ತು ತತ್ಸಮಾನ ಹುದ್ದೆಗಳ ನೇರ ನೇಮಕಾತಿ ಹಾಗೂ ಪದೋನ್ನತಿ ಸಂಬಂಧದ ಅಧಿನಿಯಮವನ್ನು ಪ್ರಕಟಿಸಿರುವ ವಿಶ್ವವಿದ್ಯಾನಿಲಯ ಪ್ರಕಟಣೆ ಸಂಖ್ಯೆ: ಇಟಿ8 / 456/2011-12 ದಿನಾಂಕ 25-10-2018.

2. ದಿನಾಂಕ 05-12-2018 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನ.

* * *

ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಯುಜಿಸಿ-ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ಇದುವರೆಗೂ ಪದೋನ್ನತಿಗೆ ಅರ್ಹರಾದ ಅಧ್ಯಾಪಕರುಗಳಿಂದ ಅರ್ಜಿಗಳನ್ನು ಅಹ್ವಾನಿಸಿ ಪ್ರಕಟಣೆ ಹೊರಡಿಸಲಾಗುತ್ತಿತ್ತು. ಇದಕ್ಕೆದುರಾಗಿ ಅರ್ಜಿ ಸಲ್ಲಿಸಿದ ಅಧ್ಯಾಪಕರುಗಳ ಅರ್ಜಿಗಳನ್ನು ಸಿಎಎಸ್ ಪದೋನ್ನತಿ ಪ್ರಕ್ರಿಯೆಗೆ ಪರಿಗಣಿಸಿ ನಂತರ ಅರ್ಹ ಅಧ್ಯಾಪಕರುಗಳಿಗೆ ಪದೋನ್ನತಿಯನ್ನು ನೀಡಲಾಗುತ್ತಿತ್ತು. ಇನ್ನು ಮುಂದೆ ಈ ಪದ್ಧತಿಯನ್ನು ಸ್ಥಗಿತಗೊಳಿಸಿ, ದಿನಾಂಕ 05-12-2018 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನುಸಾರ, ಯುಜಿಸಿ ರೆಗ್ಯುಲೇಷನ್ 2010ರ ತತ್ಸಂಬಂಧ ರಚಿತವಾಗಿರುವ ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿನ (ಉಲ್ಲೇಖ 1) ಅವಕಾಶದ ಅನುಸಾರ, ಆಯಾ ಹಂತದ ಪದೋನ್ನತಿಗೆ ನಿಯಮಾನುಸಾರ ಅರ್ಹತೆಯನ್ನು ಹೊಂದಿರುವ ಅಧ್ಯಾಪಕರುಗಳು ಅರ್ಹತಾ ದಿನಾಂಕಕ್ಕೆ ಮೂರು ತಿಂಗಳ ಮೊದಲು ಪದೋನ್ನತಿಗೆ ಅರ್ಜಿಯನ್ನು ಯುಕ್ತ ಮಾರ್ಗದ ಮೂಲಕ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಮುಂದುವರಿಕೆಯಾಗಿ, ಈ ಸಂಬಂಧ ಅಧಿನಿಯಮದಲ್ಲಿರುವ ನಿಯಮವನ್ನು (Clause 16.10) ಕೆಳಗೆ ಉಲ್ಲೇಖಿಸಲಾಗಿದ್ದು, ಈ ನಿಯಮದಲ್ಲಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಿಎಎಸ್ ಅರ್ಜಿಗಳನ್ನು ಕ್ರಮಬದ್ಧವಾಗಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

> "A Teacher working in University Department or Constituent college under UGC pay scale package, whom wishes to be considered for promotion under CAS may submit his/her application in Performance Based Appraisal System developed by IQAC based on API scores/UGC directives issued from time to time, three months in advance of the due date, that he/she should ensure that, all qualifications under CAS are completely fulfilled before submitting the applications to the University.

ಪು.ತಿ.ನೋ.

In order to avoid delays in holding selection Committees meetings for CAS promotions, the University/Constituent College should immediately initiate the process of screening/selection and complete the process within 6 months from the date of application".

ಕುಲಸಚಿವರಿಂದ ಕರಡು ಅನುಮೋದಿಸಿದೆ

01/02/2019

ಉಪ ಕುಲಸಚಿವ(ಸಾಮಾನ್ಯ)

ಉಪಕುಲಸಚಿವ
(ಸಾಮಾನ್ಯ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಗೆ;

1. ಎಲ್ಲ ಅಧ್ಯಯನ ವಿಭಾಗಗಳ ಅಧ್ಯಕ್ಷರು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಈ ಸುತ್ತೋಲೆಯನ್ನು ತಮ್ಮ ಅಧ್ಯಯನ ವಿಭಾಗ/ಕೇಂದ್ರ/ಕಾಲೇಜಿನ ಎಲ್ಲ ಅಧ್ಯಾಪಕರುಗಳ ಗಮನಕ್ಕೆ ತಂದು ಅವರ ಸಹಿಯನ್ನು ಪಡೆದ ಪ್ರತಿಯನ್ನು ಈ ಕಛೇರಿಗೆ ದಿನಾಂಕ 28-02-2019ರ ಒಳಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ತಿಳಿಸಲಾಗಿದೆ.
2. ನಿರ್ದೇಶಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ/ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು– ಈ ಸುತ್ತೋಲೆಯನ್ನು ತಮ್ಮ ಸಂಸ್ಥೆಯ ಎಲ್ಲ ಅಧ್ಯಾಪಕರುಗಳ ಗಮನಕ್ಕೆ ತಂದು ಅವರ ಸಹಿಯನ್ನು ಪಡೆದ ಪ್ರತಿಯನ್ನು ಈ ಕಛೇರಿಗೆ ದಿನಾಂಕ 28-02-2019ರ ಒಳಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ತಿಳಿಸಲಾಗಿದೆ.
3. ಸಂಯೋಜಕರು, ICD, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು– ಈ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ website ನಲ್ಲಿ ಸದಾಕಾಲ ಇರುವಂತೆ Upload ಮಾಡಲು ಕೋರಲಾಗಿದೆ.

ಪ್ರತಿ:

1. ಹಣಕಾಸು ಅಧಿಕಾರಿಯವರು/ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಕುಲಪತಿ/ಕುಲಸಚಿವ/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸಿಬ್ಬಂದಿ ವಿಭಾಗದ ಎಲ್ಲ ಕಾರ್ಯನಿರ್ವಾಹಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕಡತಕ್ಕೆ. d:\et8 new\cas 2017\cas prepone\cas circular.docx